ಮಂಗಳಂ ಜಯ ಮಂಗಳಂ ಅಕ್ರೂರಗೊಲಿದ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 636.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 339.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 153.
4. **Note:** Lyrics mentioned here are as per Ref. 1. The wordings in Ref. 2 are fully as per Ref. 1. The lyrics in Ref. 3 are slightly different and are not considered here.
5. **Note:** Singer has followed these lyrics.

ರಾಗ: ಸೌರಾಷ್ಟ್ರ ತಾಳ: ಆದಿ

ಮಂಗಳಂ ಜಯ ಮಂಗಳಂ
ಮಂಗಳಂ ಶುಭ ಮಂಗಳಂ || p ||

ಅಕ್ರೂರಗೊಲಿದ ತ್ರಿವಿಕ್ರಮಗೆ
ನಕ್ರನ ಗೆಲಿದ ಪರಾಕ್ರಮಿಗೆ
ಶಕ್ರನ ಗರ್ವಪಹಾರವ ಮಾಡಿದ
ಶುಕ್ರನ ಶಿಷ್ಯನ ಗೆಲಿದವಗೆ || 1 ||

ಗಂಗೆಯ ಪಡೆದ ಶ್ರೀರಂಗನಿಗೆ
ರಂಗು ಮಾಣಿಕದುಂಗುರದವಗೆ
ಭೃಂಗ ಕುಂತಳೆಯರ ವ್ರತವನೆ ಕೆಡಿಸಿದ
ಅಂಗಜನಯ್ಯ ಶುಭಾಂಗನಿಗೆ || 2 ||

ಧರೆಯೊಳಧಿಕ ವೆಂಕಟಾಚಲಗೆ
ಸ್ಥಿರವಾಗಿ ಪುಷ್ಕರಿಣಿಲಿ ನೆಲಸಿಹಗೆ

ಪರತತ್ವ ಶ್ರೀ ಪುರಂದರ ವಿಠಲಗೆ
ವರ ವೆಂಕಟ ಶ್ರೀನಿವಾಸಗೆ || 3 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಅಕ್ರೂರಗೊಲಿದ – ಕಂಸನ ಮಂತ್ರಿಯಾದ ಇವನು ಕಂಸನಾಣತಿಯಂತೆ ಕೃಷ್ಣ ಬಲರಾಮರನ್ನು ಮಧುರೆಗೆ ಕರೆತರುವಾಗ, ಯಮುನಾ ತೀರದಲ್ಲಿ ಕೃಷ್ಣನ ದಿವ್ಯ ಸ್ವರೂಪವನ್ನು ಮನಗಂಡು ಭಕ್ತನಾದ.

ತ್ರಿವಿಕ್ರಮ – ವಾಮನಾವತಾರದಲ್ಲಿ ಬಲಿ ಚಕ್ರವರ್ತಿಯಿಂದ ಮೂರು ಹೆಜ್ಜೆಗಳನ್ನು ದಾನವಾಗಿ ಪಡೆದುಕೊಂಡು ಭೂರ್ಲೋಕ, ಅಂತರಿಕ್ಷ, ಸ್ವರ್ಲೋಕಗಳನ್ನೆಲ್ಲ ತನ್ನ ಕಾಲಿನಿಂದಲೇ ಅಳೆದವನು, ವಿಷ್ಣು.

ನಕ್ರನ ಗೆಲಿದ ಪರಾಕ್ರಮಿ – ಗಜೇಂದ್ರ ಮೋಕ್ಷದ ಸಂದರ್ಭದಲ್ಲಿ ಮೊಸಳೆಯನ್ನು ಕೊಂದು ಆನೆಯನ್ನು (ಇಂದ್ರದ್ಯುಮ್ನನನ್ನು) ಕಾಪಾಡಿದವನು.

ಶಕ್ರನ ಗರ್ವಾಪಹಾರವ ಮಾಡಿ – ಗೋವರ್ಧನೋದ್ಧರಣ ಪ್ರಸಂಗ. ಇಂದ್ರನು ತನಗೆ ಪೂಜೆ ಸಲ್ಲಿಸಲಿಲ್ಲವೆಂದು ಗೋವಳರ ಮೇಲೆ ಸಿಟ್ಟಿಗೆದ್ದು ಸುರಿಮಳೆಯನ್ನು ಸುರಿಸಲು, ಕೃಷ್ಣನು ಬೆಟ್ಟವನ್ನೆತ್ತಿ ಗೋವಳರನ್ನೂ ಹಸುಕರುಗಳನ್ನೂ ಕಾಪಾಡಿದನು.

ಶುಕ್ರನು ಶಿಷ್ಯನ ಗೆಲಿದವ – ಶುಕ್ರಾಚಾರ್ಯನ ಶಿಷ್ಯನಾದ ಬಲಿ ಚಕ್ರವರ್ತಿಯನ್ನು ಭೂಮಿಯಿಂದ ಪಾತಾಳಕ್ಕೆ ತುಳಿದನು (ವಾಮನಾವತಾರ).

ಭೃಂಗ ಕುಂತಳೆಯರ ವ್ರತವನೆ ಕೆಡಿಸಿದ – ದುಂಬಿಗಳು ಬಂದಡರುವಂತೆ ಹೂವುಗಳನ್ನು ಮುಡಿದು ಸುವಾಸನೆಯ ಜಡೆಗಳನ್ನುಳ್ಳ ಹೆಂಗಳೆಯರು (ಗೋಪಿಯರು) ತನ್ನನ್ನು ಮೋಹಿಸುವಂತೆ ಮಾಡಿದ.

ಅಂಗಜನಯ್ಯ – ಮನ್ಮಥನ ತಂದೆ.

ಪುಷ್ಕರಿಣಿಲಿ – ಸ್ವಾಮಿ ಪುಷ್ಕರಿಣೀ ತೀರ್ಥದ ದಂಡೆಯ ಮೇಲೆ.

Classification: Keerthane
Ankita: sri purandara vittala
Location: tirupati
Category: Mangala Song, Srinivasa Stuti, Pooja Tatva.

Sub-Category: Krishna, mangala, akrura, trivikrama, mosale, garva, ranga, gange, vrata, bhumi, srinivasa, Tirupati, shubha, ungura, gopi,

Pravachana: NA

Explanation: NA